


### ಚಿನ್ನದ್ದೇ ಕಾಲ!

‘ಹಳದಿ ಲೋಹದ ಮೋಹಕ ಲೋಕ’ (ಸೆ. 25, ಸಂಧ್ಯಾ ಹೆಗಡೆ) ಗಮನಸೆಳೆಯಿತು. ‘ಚಿನ್ನಕ್ಕೂ ಬಂತು ಚಿನ್ನದಂಥ ಕಾಲ’ (ಉಮಾ ಅನಂತ್) ಲೇಖನ ಓದಿ, ಹೊರಟು ಹೋಯ್ತು ಚಿನ್ನ ಕೊಳ್ಳುವ ಕಾಲ ಎನಿಸಿತು. ಇನ್ನೇನಿದ್ದರೂ ಹೆಂಡತಿಯನ್ನೇ ಸದಾ ಕಾಲ ಚಿನ್ನ ಚಿನ್ನ ಎಂದು ಕರೆಯಲು ಬಂತು ಕಾಲ!

—ವಾಸಣ್ಣ, ಧಾರವಾಡ

### ಪರ್ಯಾಯವೂ ಇದೆಯಲ್ಲ...

ಕನಕ, ಸ್ವರ್ಣ, ಹೇಮಾ, ಬಂಗಾರ ಎಂದೆಲ್ಲಾ ನಾಮಗಳನ್ನು ಹೊಂದಿರುವ ಚಿನ್ನ ಸಾಮಾನ್ಯ ಜನರ ಕೈಗೆಟುಕದಂತಾಗಿರುವ ಕಾರಣ, ಅದರ ದರ. ಆದರೂ ನಿರಾಶರಾಗುವ ಅವಶ್ಯಕತೆ ಇಲ್ಲ. ಪರ್ಯಾಯವಾಗಿ ಹಗುರ ತೂಕದ ಒಡವೆಗಳಿಂದ ಹೆಣ್ಣಿನ ಬಯಕೆ ಪೂರೈಸುವ ತಂತ್ರಗಾರಿಕೆಯುಂಟು. ಚಿನ್ನವನ್ನು ಹೋಲುವ, ಹೆಚ್ಚೇ ಮೆರುಗು, ಡಿಸೈನ್‌ಗಳಿರುವ ನಕಲಿ ಆಭರಣಗಳು ಇಂದಿನ ಯುವತಿಯರನ್ನು ಅಯಸ್ಕಾಂತದಂತೆ ಸೆಳೆದು ಬಯಕೆ ಈಡೇರುವಂತಾಗಿದೆ. ಸ್ವಲ್ಪ ಜಾಗರೂಕತೆಯಿಂದ ಜೋಪಾನ ಮಾಡಿದಲ್ಲಿ ಬಾಳಿಕೆ ಬರಬಹುದು. ಬ್ಯಾಂಕ್ ಲಾಕರ್‌ಗಳಿಗೆ ವಾರ್ಷಿಕ ಹಣ ಕಟ್ಟುವ, ಕಳ್ಳರು ದೋಚುವ ಭಯವಿಲ್ಲದೆ ಆಸೆ ಪೂರೈಸುವ ಸುಲಭೋಪಾಯ ಇಮಿಟೇಷನ್ ಒಡವೆಗಳು. ಏನಂತೀರಾ?

—ಮಧುರಾ

### ಆಪತ್ಕಾಲದ ಬಂಧು

ಚಿನ್ನದ ಕುರಿತ ಲೇಖನಗಳನ್ನು ಓದಿದಾಗ, ಚಿನ್ನದ ಬೆಲೆ ಎಂದಿಗೂ ಕಡಿಮೆಯಾಗುವುದಿಲ್ಲ ಎನಿಸುತ್ತದೆ. ಆದರೆ ಇದು ಆಪತ್ಕಾಲದ ಬಂಧು ಎನ್ನಬಹುದು. ಕಷ್ಟಪಟ್ಟು ಅಲ್ಪಸ್ವಲ್ಪ ತೆಗೆದಿರಿಸಿದ ಬಂಗಾರ ಕಷ್ಟ ಕಾಲದಲ್ಲಿ ಸಹಾಯವಾಗುತ್ತದೆ, ಬಂಧುಗಳು, ನೆರೆಹೊರೆಯವರು ಸಹಾಯವಾಗುತ್ತಾರೊ ಇಲ್ಲವೊ ತೆಗೆದಿರಿಸಿದ ಚಿನ್ನ ಕಷ್ಟ ಕಾಲದಲ್ಲಿ ಮರ್ಯಾದೆಯನ್ನಂತೂ ಉಳಿಸುತ್ತದೆ.

—ಸಿ.ಕೆ. ಗಣಪ್ಪನವರ ಮುಂಡರಗಿ, ಗದಗ

### ವರ್ಣರಂಜಿತ ಚಿತ್ರಗಳು

‘ಮಿಲ್ ಫೋರ್ಡ್ ಸೌಂಡ್; ಕಣಿವೆಯೊಡಲ ವಿಸ್ಮಯ’ (ಸೆ. 25, ಡಾ. ಎಚ್.ಎಸ್. ಅನುಪಮಾ) ಪ್ರವಾಸ ಕಥನ ಬಹಳ ಇಷ್ಟವಾಯಿತು. ನ್ಯೂಜಿಲೆಂಡ್‌ನ ವರ್ಣರಂಜಿತ ಪ್ರಕೃತಿ ಚಿತ್ರಗಳನ್ನು ನೋಡಿ ಬೆರಗಾದೆ. ಎಂತಹ ರಮಣೀಯ ದೃಶ್ಯಗಳವು!. ನಾವು ಆ ಸ್ಥಳದಲ್ಲಿಯೇ ಇದ್ದೇವೇನೋ ಎಂಬ ಭಾವ ತರುವಂಥ ವಿವರಣೆಗಳು ಖುಷಿ ನೀಡಿದವು.

—ಖಂಡಪರಶು ಮಾಗಡಿ

### ಆಧ್ಯಾತ್ಮಿಕ ಭಾವ

ಒಳ್ಳೆಯ ಸ್ಥಳವನ್ನು ಚಿತ್ರಿಸಿರುವ ರೀತಿ ಮತ್ತು ಮಿಲ್‌ಫೋರ್ಡ್ ಕುರಿತು ಕಣ್ಣಿಗೆ ಕಟ್ಟುವ ಹಾಗೆ ನೀಡಿದ ಮಾಹಿತಿಗಳು ಬಹಳ ಚೆನ್ನಾಗಿವೆ. ಅಲ್ಲಿನ ಮನೋಹರ ಸ್ಥಳಗಳನ್ನು ಸರಳ ಸುಂದರ ಕನ್ನಡದಲ್ಲಿ ಪರಿಚಯಿಸಿದ ರೀತಿ ಮನಸ್ಸಿಗೆ ಮುದ ನೀಡಿತು. ‘ಇಂಥ ಪ್ರಕೃತಿಯಲ್ಲಿ ಲೀನವಾಗುವುದಕ್ಕಿಂತ ಹೆಚ್ಚಿನ



ಸಂತೋಷ ಬೇರೆ ಇನ್ನೇನಿದೆ’ ಎಂದು ಲೇಖಕರು ಹೇಳಿದ ವಾಕ್ಯ ಆಧ್ಯಾತ್ಮಿಕ ಭಾವ ತುಂಬಿತು. ಕಡೆಯದಾಗಿ, ಅವರು ಇಂತಹ ರಮ್ಯವಾದ ಭುವಿಗೆ ಮರೆಯದೆ ಧನ್ಯವಾದಗಳನ್ನು ಹೇಳಿದ್ದು ತುಂಬಾ ಇಷ್ಟವಾಯಿತು. ಪ್ರಪಂಚದಾದ್ಯಂತ ಇಂತಹ ಅದ್ಭುತಗಳನ್ನು ಪ್ರಕೃತಿ ಮಾನವನಿಗೆ ಕರುಣಿಸಿದೆ. ಅದನ್ನು ಉಳಿಸಿ, ಬೆಳೆಸುವ, ಆಸ್ವಾದಿಸುವ ಮನಸ್ಸು ಇರಬೇಕಷ್ಟೆ.

—ನೀಲಕಂಠಪ್ಪ ಚಿಕ್ಕಮುದ್ದೆ ಬೀರೂರು

### ಗಾಂಭೀರ್ಯ, ಪ್ರಶಾಂತ

ಪ್ರವಾಸ ಕಥನ ತುಂಬಾ ಚೆನ್ನಾಗಿ ಮೂಡಿಬಂದಿದೆ. ನಾನು ನನ್ನ 2019ರ ನ್ಯೂಜಿಲೆಂಡ್ ಪ್ರವಾಸದಲ್ಲಿ ಈ ಸುಂದರ ಸ್ಥಳವನ್ನು ನೋಡಿದ್ದೇನೆ. ಲೇಖಕರು ಹೇಳಿದಂತೆ ಈ ಸ್ಥಳವು ರಮಣೀಯ, ಗಾಂಭೀರ್ಯ, ಪ್ರಶಾಂತತೆಯಿಂದ ಕೂಡಿದೆ.

—ಟಿ.ಎಸ್. ನಾಗರಾಜ ರಾವ್

### ಇಂಥವರ ಸಂಖ್ಯೆ ಹೆಚ್ಚಾಗಲಿ

‘ಶಿಕ್ಷಣದ ಪ್ರಕಾಶ’ (ಸೆ. 25, ಪ್ರವೀಣ ಕುಲಕರ್ಣಿ) ‘ಸೆಲೆಬ್ರಿಟಿ’ ಅಂಕಣದಲ್ಲಿ ನಮ್ಮ ವಿದ್ಯಾವರ್ಧಕ ಸಂಘ ಶಾಲೆ ಮೇಷ್ಟ್ರು ಸತ್ಯಪ್ರಕಾಶ್ ಅವರನ್ನು ಪರಿಚಯಿಸಿದ್ದು ಬಹಳ ಖುಷಿಯಾಯಿತು. ನಮ್ಮ ನಾಡಿನಲ್ಲಿ ಮಠ ಮಾನ್ಯಗಳು ವಿದ್ಯೆಯ ದಾಸೋಹ ಮಾಡುತ್ತಿರುವುದು ಪ್ರಶಂಸನಾರ್ಹ. ಆದರೆ ಶಿಕ್ಷಕರೊಬ್ಬರು ವೃತ್ತಿಯಾಗಿ ವಿದ್ಯೆಯನ್ನು ನೀಡಿದ್ದಲ್ಲದೆ ನಿವೃತ್ತಿ ನಂತರವೂ ಮುಂದುವರಿಸಿಕೊಂಡು ಬಡವರಿಗೆ ನೆರವಾದದ್ದು ಸ್ತುತ್ಯರ್ಹ. ನಾನು ಈ ಶಾಲೆಯ ಐವತ್ತು ವರ್ಷಗಳ (1975–78) ಹಿಂದಿನ ವಿದ್ಯಾರ್ಥಿ.

ಒಬ್ಬ ಸೆಲೆಬ್ರಿಟಿಯಾಗಿ ಶಿಕ್ಷಕರೊಬ್ಬರು ಕಾಣಿಸಿಕೊಂಡದ್ದು ಅಪರೂಪವೆಂದೆನಿಸಿ (ಅದರಲ್ಲೂ ನಮ್ಮ ಹೆಮ್ಮೆಯ ಶಾಲೆಯ ಮೇಷ್ಟ್ರೊಬ್ಬರು) ಓದಿದ ತಕ್ಷಣ ಬರೆಯುವಂತೆ ಪ್ರೇರೇಪಿಸಿದ್ದು ಅವರಲ್ಲಿನ ಮಾನವೀಯ ಗುಣಗಳು. ಇಂತಹ ಮೇಷ್ಟ್ರುಗಳ ಸಂಖ್ಯೆ ಹೆಚ್ಚಾಗಲಿ.

—ಓಂಕಾರ್ ಗುರುಸಿದ್ದಪ್ಪ ಕೊಟ್ರೆ, ಬೆಂಗಳೂರು

### ಸ್ಫೂರ್ತಿ ತುಂಬಿದ ಅಧಿಕಾರಿ

‘ಬುಡಕಟ್ಟು ಕುಟುಂಬಗಳ ಆಶಾಕಿರಣ’ (ಸೆ. 25, ಶಶಿಕುಮಾರ್ ಸಿ.) ಸ್ಫೂರ್ತಿದಾಯಕವಾಗಿದೆ. ಆಂಧ್ರಪ್ರದೇಶದ ನಂದ್ಯಾಲ್ ಜಿಲ್ಲಾಧಿಕಾರಿ ರಾಜಕುಮಾರಿ ಗನಿಯಾ ಅವರ ಪರಿಚಯ ಓದಿ ಮನಮಿಡಿಯಿತು. ಇವತ್ತಿನ ಯುವ ಅಧಿಕಾರಿಗಳಿಗೆ ಅವರು ಸ್ಫೂರ್ತಿ.

—ಲಕ್ಷ್ಮಣ್ ರಾವ್ ಎಂ.ಎಲ್., ದಾವಣಗೆರೆ

### ಭಾಷಾ ವೈವಿಧ್ಯ

‘ಚೆನ್ನುಡಿ’ ಅಂಕಣ ಸೊಗಸಾಗಿ ಮೂಡಿಬರುತ್ತಿದೆ. ನಮ್ಮ ಕನ್ನಡ ಭಾಷೆಯ ವೈವಿಧ್ಯತೆಯ ಬಗ್ಗೆ ಬೆಳಕು ಚೆಲ್ಲುತ್ತಿದೆ. ಸೆಪ್ಟೆಂಬರ್ 18ರ ಸಂಚಿಕೆಯಲ್ಲಿ ಪ್ರಕಟವಾಗಿರುವ ಕುಸುಮಾ ಆಯರಹಳ್ಳಿ ಅವರ ‘ಉಳಿದವರು ಕಂಡಂತೆ’ ಲೇಖನ ಓದಿದಾಗ ಆಡುಮಾತಿನ ಶಬ್ದಶಿಲ್ಪಿ ದೇವನೂರು ಮಹಾದೇವ ಅವರ ಕುಸುಮಬಾಲೆ, ಒಡಲಾಳ ಕಾದಂಬರಿಗಳನ್ನು ಓದಿದ್ದು ಹಾಗೂ ಆಗ ಕೆಲವು ಮಾತುಗಳನ್ನು ಅರ್ಥೈಸಿಕೊಳ್ಳಲು ನಾನು ಪರದಾಡಿದ್ದು ನೆನಪಾಯಿತು. ಏಕೆಂದರೆ ಅದೇ ಭಾಷಾ ಶೈಲಿ, ಪ್ರಾದೇಶಿಕ ಸೊಗಡು ಇಲ್ಲಿ ಮನೋಜ್ಞವಾಗಿ ಅಭಿವ್ಯಕ್ತಗೊಂಡಿದೆ.

—ಗಾಯತ್ರಿ ವೆಂಕಟೇಶ್, ಮೈಸೂರು

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in